# ಕರ್ನಾಟಕ ವಿಧಾನ ಪರಿಷತ್ತು
## ಶೂನ್ಯ ವೇಳೆಯ ಪ್ರಸ್ತಾಪ

ವಿಷಯ:- ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್, ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ನ್ಯುಮೋನಿಯ ಆತಂಕ ಹೆಚ್ಚಾಗಿದ್ದು, ಕಳೆದ ಎರಡು ವಾರದಿಂದ ನಗರದ ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ವೈರಲ್ ನ್ಯುಮೋನಿಯಾ ಪ್ರಕರಣಗಳು ವರದಿಯಾಗುತ್ತಿರುವ ಬಗ್ಗೆ ದಿನಾಂಕ5.12.2023ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ 'ಮಕ್ಕಳಲ್ಲಿ ಹೆಚ್ಚಿದ ಉಸಿರಾಟದ ತೊಂದರೆ' ಶಿರೋನಾಮೆಯಡಿ ವರದಿ ಪ್ರಕಟವಾಗಿರುತ್ತದೆ.

ಮಾಹಿತಿ ಪ್ರಕಾರ ಚೀನಾ ಮತ್ತು ಅಮೇರಿಕಾದಲ್ಲಿ ಕಾಣಿಸಿಕೊಂಡ ಈ ಪ್ರಕರಣಗಳು ನಿಧಾನಗತಿಯಲ್ಲಿ ಬೆಂಗಳೂರು ನಗರಕ್ಕೆ ಹರಡುತ್ತಿರುವ ಬಗ್ಗೆ ಶಂಕೆ ವ್ಯಕ್ತವಾಗಿರುತ್ತದೆ. ಅಂದರೆ ದಿನಕ್ಕೆ ಮೂರರಿಂದ ನಾಲ್ಕು ವೈರಲ್ ನ್ಯುಮೋನಿಯಾ ಪ್ರಕರಣಗಳು ದಾಖಲಾಗುತ್ತಿದ್ದು, ಈಗಾಗಲೇ ಸುಮಾರು 25 ರಿಂದ 30 ಮಕ್ಕಳಲ್ಲಿ ನ್ಯುಮೋನಿಯಾ ಪತ್ತೆಯಾಗಿವೆ ಎನ್ನುವುದು ತಿಳಿದುಬಂದಿರುತ್ತದೆ.

ಜಾಗತಿಕ ಮಟ್ಟದಲ್ಲಿ ಮತ್ತೊಂದು ಸಾಂಕ್ರಾಮಿಕ ಭೀತಿ ಎದುರಾಗಬಹುದಾಗಿದ್ದು, ಈಗಾಗಲೇ ಎಚ್ಚರಿಕೆಯಿಂದ ಇರುವಂತೆ ಪೋಷಕರಿಗೆ ಸೂಚನೆ ನೀಡಲಾಗಿದೆ. ರಾಜ್ಯ ಆರೋಗ್ಯ ಇಲಾಖೆಯು ಶಾಲಾ ಮಕ್ಕಳಿಗೆ ಅನಿಮಿಯಾ ಪರೀಕ್ಷೆಗೆ ಮುಂದಾಗಿದ್ದು, ಮುಂಜಾಗ್ರತಾ ಕ್ರಮವಾಗಿ ನ್ಯುಮೋನಿಯಾ ಪರೀಕ್ಷೆ ನಡೆಸಲು ನಿರ್ಧರಿಸಿದೆ ಎಂಬ ಮಾಹಿತಿಯೂ ಲಭ್ಯವಾಗಿರುತ್ತದೆ.

ಆದಕಾರಣ, ಈ ವಿಷಯದ ಬಗ್ಗೆ ಸರ್ಕಾರ ಹೆಚ್ಚಿನ ಕಾಳಜಿ ವಹಿಸಿ, ಮಕ್ಕಳಲ್ಲಿ ಹರಡಬಹುದಾದ ಸೋಂಕಿನ ಭೀತಿಯನ್ನು ತಡೆಗಟ್ಟುವ ಮತ್ತು ಆರೋಗ್ಯ ರಕ್ಷಣೆಗೆ ಬೇಕಾದ ಅಗತ್ಯ ಕ್ರಮಗಳು ಹಾಗೂ ಜಾಗೃತಿಯನ್ನು ಮೂಡಿಸುವಂಥ ಅವಶ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಕುರಿತು ಮಾನ್ಯ ಆರೋಗ್ಯ ಸಚಿವರ ಹೇಳಿಕೆ:

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:

ಚೀನಾ ಮತ್ತು ಅಮೇರಿಕಾದಲ್ಲಿ ಕಾಣಿಸಿಕೊಂಡ ನ್ಯುಮೋನಿಯಾ ಪ್ರಕರಣಗಳು ಬೆಂಗಳೂರು ನಗರದಲ್ಲಿ ದಾಖಲಾಗುತ್ತಿರುವ ಬಗ್ಗೆ, ನ್ಯುಮೋನಿಯಾ ಪ್ರಕರಣಗಳು ಮಕ್ಕಳಲ್ಲಿ ಕಾಣಿಸಿಕೊಂಡಿರುವ ಬಗ್ಗೆ ಮಾಹಿತಿಯನ್ನು ಭಾರತ ಸರ್ಕಾರದ ವೆಬ್ ಪೋರ್ಟಲ್ IDSP IHIP ಗಳಲ್ಲಿ ದಾಖಲು ಮಾಡಲಾಗುತ್ತಿದೆ. ಪ್ರಕರಣಗಳು ರಾಜ್ಯದಲ್ಲಿ ಉಲ್ಬಣವಾಗಿರುವುದಿಲ್ಲ.

ನ್ಯೂಮೋನಿಯಾ ಪರೀಕ್ಷೆಯನ್ನು ಪ್ರತ್ಯೇಕವಾಗಿ ಮಾಡಲಾಗುತ್ತಿಲ್ಲ, ಬದಲಾಗಿ ILI ಮತ್ತು SARI ಪ್ರಕರಣಗಳನ್ನು ಸೂಕ್ಷ್ಮವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಚೀನಾ ಮತ್ತು ಅಮೇರಿಕಾದಲ್ಲಿ ನ್ಯೂಮೋನಿಯಾ ಕಾಣಿಸಿಕೊಂಡಿರುವುದರಿಂದ, ಮುಂಜಾಗ್ರತೆ ಕ್ರಮವಾಗಿ ಜನ-ಸಾಮಾನ್ಯರಿಗೆ ಸಲಹಾ ಮಾರ್ಗಸೂಚಿಯನ್ನು (Advisory) ಅನ್ನು ಈಗಾಗಲೇ ದಿನಾಂಕ 28/11/2023 ರಂದು ಹೊರಡಿಸಲಾಗಿದೆ.

5 ವರ್ಷದೊಳಗಿನ ಮಕ್ಕಳ ಆರೋಗ್ಯ ಹಿತದೃಷ್ಟಿಯಿಂದ ಭಾರತ ಸರ್ಕಾರವು ಮಕ್ಕಳ ಮರಣಕ್ಕೆ ಪ್ರಮುಖ ಕಾರಣವಾದ ನ್ಯುಮೋನಿಯ ಖಾಯಿಲೆ ಬಗ್ಗೆ ಗಮನಹರಿಸಲು, Social Awareness and Action to Neutralise Pneumonia Successfully (SAANS) (ನ್ಯೂಮೋನಿಯವನ್ನು ಯಶಸ್ವಿಯಾಗಿ ತಟಸ್ಥಗೊಳಿಸಲು ಸಾಮಾಜಿಕ ಜಾಗೃತಿ ಮತ್ತು ಕ್ರಿಯೆ) ಅಭಿಯಾನವನ್ನು ರೂಪಿಸಿದ್ದು, ಪ್ರತಿ ವರ್ಷ ನವೆಂಬರ್ 15ನೇ ದಿನಾಂಕದಿಂದ ಫೆಬ್ರವರಿ 28ರ ವರೆಗೂ, ಅಂದರೆ ಚಳಿಗಾಲದ ಅವಧಿಯಲ್ಲಿ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳ ಮೂಲಕ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಎಲ್ಲಾ ಚಟುವಟಿಕೆಗಳು ಕ್ಷೇತ್ರ ಮಟ್ಟದಲ್ಲಿ ಚಾಲ್ತಿಯಲ್ಲಿರುತ್ತವೆ.

Scanned with ACE Scanner

ಆಶಾ ಕಾರ್ಯಕರ್ತೆಯರು ಮತ್ತು ಇಲಾಖೆಯ ಕ್ಷೇತ್ರ ಸಿಬ್ಬಂದಿಗಳು ಐದು ವರ್ಷದೊಳಗಿನ ಮಕ್ಕಳ ಮನೆಗೆ ಭೇಟಿ ನೀಡಿ ನ್ಯುಮೋನಿಯ ಕುರಿತಾಗಿ ಅರಿವು ಮೂಡಿಸಿ ಮಗುವಲ್ಲಿ ನ್ಯುಮೋನಿಯದ ಲಕ್ಷಣಗಳು ಕಂಡು ಬಂದಾಗ ಅಗತ್ಯ ಕ್ರಮವಹಿಸಿ ಹೆಚ್ಚಿನ ಚಿಕಿತ್ಸಾಗಾಗಿ ಹತ್ತಿರದ ಸಾರ್ವಜನಿಕ ಆಸ್ಪತ್ರೆಗಳಿಂದ ಚಿಕಿತ್ಸಾ ಸೌಲಭ್ಯ ದೊರಕಿಸುವ ಚಟುವಟಿಕೆ ಕೈಗೊಳ್ಳುತ್ತಿದ್ದಾರೆ.

ಈ ಸಂದರ್ಭದಲ್ಲಿ ಎಲ್ಲಾ ಹಂತದ ಆಸ್ಪತ್ರೆಗಳಲ್ಲಿ ನ್ಯುಮೋನಿಯಾ ಚಿಕಿತ್ಸೆಗೆ ಅವಶ್ಯವಿರುವ ಎಲ್ಲಾ ಔಷಧಿಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುವಂತೆ ಕ್ರಮವಹಿಸಿ, ಆಸ್ಪತ್ರೆಗಳನ್ನು Strengthen ಮಾಡಲಾಗಿದೆ.

ನ್ಯೂಮೋನಿಯಾ ಬಾಧಿಸದಂತೆ, ಮುಂಜಾಗೃತಾ ಕ್ರಮವಾಗಿ ಮಕ್ಕಳಿಗೆ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ (Universal Immunisation Programme) ಅಡಿಯಲ್ಲಿ ರಾಷ್ಟ್ರೀಯ ಲಸಿಕಾ ವೇಳಾಪಟ್ಟಿಯ ಪ್ರಕಾರ ಎಲ್ಲಾ ಅರ್ಹ ಮಕ್ಕಳಿಗೆ 3 ಡೋಸ್ ನ್ಯುಮೋಕೊಕಲ್ ಕಾಂಜುಗೇಟ್ ಲಸಿಕೆಯನ್ನು (6 ವಾರ ಮತ್ತು 14 ವಾರಗಳಲ್ಲಿ ಎರಡು ಪ್ರಾಥಮಿಕ ಡೋಸ್‌ಗಳು ಮತ್ತು 9ನೇ ತಿಂಗಳುಗಳಲ್ಲಿ ಬೂಸ್ಟರ್ ಡೋಸ್) ನೀಡಲಾಗುತ್ತಿದೆ.

ನ್ಯುಮೋನಿಯ ಕುರಿತಾಗಿ ಇಲಾಖೆಯಿಂದ ಹಮ್ಮಿಕೊಂಡಿರುವ ಎಲ್ಲಾ ಚಟುವಟಿಕೆಗಳ ಪ್ರಯೋಜನ ಪಡೆಯಲು ಮತ್ತು ಜನ-ಜಾಗೃತಿ ಮೂಡಿಸಲು ದಿನಾಂಕ13/12/2023 ರಂದು ಬೆಳಗಾವಿಯಲ್ಲಿ ಜಾಗೃತಿ ಅಭಿಯಾನವನ್ನೂ ಕೂಡ ಹಮ್ಮಿಕೊಳ್ಳಲಾಗಿದೆ.

ಕಡತ ಸಂಖ್ಯೆ: ಆಕುಕ /ಶೂನ್ಯವೇಳೆ/2023

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Scanned with OKEN Scanner

Scanned with ACE Scanner